ಈ) ಬಸವನ ಬಾಗೇವಾಡಿ ಪಟ್ಟಣಕ್ಕೆ ಒಳಚರಂಡಿ ಯೋಜನೆಯನ್ನು ರೂಪಿಸಲು ಸರ್ವೇಕಾರ್ಯ ಪೂರ್ಣಗೊಂಡಿರುತ್ತದೆ. ಈ ಬಗ್ಗೆ ಮಂಡಳಿಯಿಂದ ಅಂದಾಜುಗಳು ಬಂದ ನಂತರ ಮುಂದಿನ ಕ್ರಮ ಜರುಗಿಸಲಾಗುವುದು.

5431(6259) ಶ್ರೀ ಶಿವಾನಂದ ಎಸ್. ಪಾಟೀಲ್ (ಬಸವನಬಾಗೇವಾಡಿ) : ಮಾನ್ಯ ಪೌರಾಡಳಿತ ಮತ್ತು ಕೆ.ಯು.ಐ.ಡಿ.ಎಫ್.ಸಿ. ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬಿಜಾಪುರ ನಗರದ ಒಳಚರಂಡಿ ವ್ಯವಸ್ಥೆ ಹದಗೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಿಜಾಪುರ ನಗರದಲ್ಲಿ ಒಳಚರಂಡಿ ವ್ಯವಸ್ಥೆ ಇಲ್ಲದೇ ಇರುವ ಹೊಸ ಬಡಾವಣೆಗಳ ಸಂಖ್ಯೆ ಎಷ್ಟು; (ಬಡಾವಣೆಗಳ ವಿವರ ನೀಡುವುದು);

ಇ) ಮೊದಲನೆ ಹಂತದ ಒಳಚರಂಡಿ ವ್ಯವಸ್ಥೆ ಯಾವಾಗ ಕಾರ್ಯಗತಗೊಂಡಿತ್ತು ಹಾಗೂ ಎಷ್ಟು ಜನಸಂಖ್ಯೆಗೆ, ಎಷ್ಟು ಬಡಾವಣೆಗಳನ್ನು ನಿರ್ಮಿಸಲ್ಪಟ್ಟಿತು.

ಈ) ಮೊದಲನೇ ಹಂತದ ಒಳಚರಂಡಿ ವ್ಯವಸ್ಥೆ ಸಂಪೂರ್ಣ ಹದಗೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಹಾಗಿದ್ದಲ್ಲಿ ಒಂದನೇ ಹಂತದ ಒಳಚರಂಡಿ ವ್ಯವಸ್ಥೆಯನ್ನು ಪುನರ್ ನಿರ್ಮಾಣ ಮಾಡುವ ಜವಾಬ್ದಾರಿ ಸರ್ಕಾರದ್ದಲ್ಲವೆ ಹಾಗೂ ಎರಡನೇ ಹಂತದ ಒಳಚರಂಡಿ ವ್ಯವಸ್ಥೆ ಯಾವಾಗ ಕಾರ್ಯಗತವಾಗುವುದು?

ಶ್ರೀ ಎಸ್.ಆರ್. ಮೋರೆ (ಪೌರಾಡಳಿತ ಮತ್ತು ಕೆ.ಯು.ಐ.ಡಿ.ಎಫ್.ಸಿ. ಸಚಿವರು) :

ಅ) ಬಂದಿದೆ.

ಆ) ಸುಮಾರು 68 ಪಟ್ಟಿ ಲಗತ್ತಿಸಿದೆ.

ಇ) ವಿಜಾಪುರ ನಗರ: ಮೊದಲನೆಯ ಹಂತದ ಒಳಚರಂಡಿ ಯೋಜನೆಯ 1976ರಲ್ಲಿ, 2001ನೇ ಇಸ್ವಿಯಲ್ಲಿ ನಿರೀಕ್ಷಿಸಲಾಗಿದ್ದ 1,50,000 ಜನಸಂಖ್ಯೆಗೆ ನಗರದ ಕೋಟೆಯ ನಡುವಿನ ಸ್ಥಳಕ್ಕೆ ಯೋಜಿಸಿ ಕಾರ್ಯಗತ ಗೊಳಿಸಲಾಗಿತ್ತು.

ಈ) ಸರ್ಕಾರದ ಗಮನಕ್ಕೆ ಬಂದಿದೆ.

ಉ) ಒಂದನೇ ಹಂತದ ಒಳಚರಂಡಿ ಪುನರ್ ನಿರ್ಮಾಣದ ಜವಾಬ್ದಾರಿ ವಿಜಾಪುರ ನಗರಸಭೆಯದ್ದಾಗಿರುತ್ತದೆ. ಏಷ್ಯನ್ ಅಭಿವೃದ್ಧಿ ಬ್ಯಾಂಕ್ (ಎ.ಡಿ.ಬಿ)ನ ನೆರವಿನೊಂದಿಗೆ ಉತ್ತರ ಕರ್ನಾಟಕ ನಗರ ಮೂಲ ಸೌಕರ್ಯ ಅಭಿವೃದ್ಧಿ ಯೋಜನೆ ಅಡಿಯಲ್ಲಿ ವಿಜಾಪುರ ನಗರವನ್ನು ಸೇರಿಸಲಾಗಿದ್ದು, ನಗರದ ಒಂದನೇ ಹಂತದ ಒಳಚರಂಡಿ ಪುನರ್ ನಿರ್ಮಾಣ ಹಾಗೂ ಎರಡನೇ ಹಂತದ ಒಳಚರಂಡಿ ಯೋಜನೆಗಳನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ. ಈ ಬಗ್ಗೆ ಸಮೀಕ್ಷೆ ಕಾರ್ಯ ನಡೆದಿದೆ.

ಅನುಬಂಧ

ಮನಗೊಳಿ ರಸ್ತೆ: ರಾಧಕೃಷ್ಣನಗರ, ಶ್ರೀ ಸಿದ್ದೇಶ್ವರ ಬಡಾವಣೆ, ಸಿದ್ಧವಿನಾಯಕ ನಗರ, ಗಣೇಶನಗರ, ತ್ರಿಮೂರ್ತಿನಗರ, ಇಬ್ರಾಹಿಂಪೂರ.

ಬಾಗಲಕೋಟೆ ರಸ್ತೆ : ವಜ್ರ ಹನುಮಾನನಗರ, 1 ಹಾಗೂ 2, ಚಾಣಕ್ಯ ನಗರ, ಸ್ಟಾರ್ ಕಾಲನಿ, ಕೆ.ಎಸ್.ಆರ್.ಟಿ.ಸಿ ಕಾಲನಿ, ಗಿರೀಶ್ ಕಾಲನಿ ಸುಹಾಗ್ ಕಾಲನಿ, ರಾಘವೇಂದ್ರ ಕಾಲನಿ.

ಆರ್.ಟಿ.ಓ. ಕಛೇರಿಯಿಂದ ಜಮಖಂಡಿ ಕ್ರಾಸ್‌ವರೆಗೆ : ನೆಹರೂ ನಗರ, ಅಹ್ಮದ ನಗರ, ರಾಮನಗರ, ರಾಜಾಜಿನಗರ, ಕಿತ್ತೂರು ಚನ್ನಮ್ಮ ನಗರ.

ಸೋಲಾಪುರ ರಸ್ತೆ : ಬಂಜಾರಾ ಕಾಲನಿ, ರಾಜೇಂದ್ರನಗರ, ಶ್ರೀನಗರ, ಮಲ್ಲಿಕಾರ್ಜುನ ನಗರ, ಘಾಟಿಗೇ ಲೇಔಟ್, ಸದಾಶಿವ ನಗರ ಡಿ.ಸಿ.ಸಿ. ಬ್ಯಾಂಕ್ ಏರಿಯಾ, ಸಜ್ಜನ ಲೇಔಟ್.

ಜೈಲ ರಸ್ತೆ : ಭಾವಸಾರನಗರ, ಶಕ್ತಿ ನಗರ, ಮಂಜುನಾಥ ನಗರ, ದರ್ಗಾ ಸರಕಾರಿ ನೌಕರರ ಕಾಲನಿ.

ಅಥಣಿ ರಸ್ತೆ : ಸ್ವಾತಂತ್ರ್ಯ ಯೋಧರ ಕಾಲನಿ, ಲಿಡ್ಕರ್ ಕಾಲನಿ, ಸಿದ್ದೇಶ್ವರ ಕಾಲನಿ, ಭೈರವ ನಗರ, ಭೋತಾರ ಕಾಲನಿ, ಕುಲಕರ್ಣಿ ಲೇಔಟ್, ಮಾರುತಿ ಕಾಲನಿ, ಪಾರೇಖನಗರ, ಇಟಗಿ ಕಾಲನಿ, ಖುರೇಶಿ ಕಾಲನಿ, ಹಿಂಗೂಲಾಂಬಿಕಾ ಕಾಲನಿ, ಟ್ರೀಝುರಿ ಕಾಲನಿ, ಅಯ್ಯಪ್ಪಸ್ವಾಮಿ ನಗರ, ನಂದಿನಗರ, ಟಕ್ಕೆ.

ಆಶ್ರಮ ರಸ್ತೆ : ನೀಲಾನಗರ, ಆನಂದ ನಗರ, ಐಶ್ವರ್ಯನಗರ, ಪ್ರಗತಿನಗರ, ವಿದ್ಯಾ ನಗರ, ಪದ್ಮಾವತಿ ಕಾಲನಿ, ಸುರಕ್ಷಾ ಕಾಲನಿ, ಗಮಾಸ್ತೆ ಕಾಲನಿ, ಅಕ್ಕಿ ಲೇಔಟ.

ಸಿಂದಗಿ ರಸ್ತೆ : ಜೈ ಕರ್ನಾಟಕ ಕಾಲನಿ, ನಾಗೇಶ ಕಾಲನಿ, ಅಲ್ಲಾಪುರ ತಾಂಡಾ, ರಂಭಾಪುರ, ಲಕ್ಷ್ಮೀ ನಗರ, ಹಮಾಲರ ಕಾಲನಿ, ಯೋಗಾಪುರ ಕಾಲನಿ, ಗಾಂಧಿ ಆಶ್ರಮ ಬಡಾವಣೆ, ಗುನಾಪುರ ಆಶ್ರಯ ಬಡಾವಣೆ, ಮುನೇಶ್ವರ ನಗರ, ಅಲ್ಲಾಪುರ.

5432(6260) ಶ್ರೀ ಶಿವಾನಂದ ಎಸ್. ಪಾಟೀಲ್ (ಬಸವನಬಾಗೇವಾಡಿ) : ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರ ಜಿಲ್ಲೆಯನ್ನು ನಂಜುಂಡಪ್ಪ ವರದಿಯಂತೆ ಅತೀ ಹಿಂದುಳಿದ ಜಿಲ್ಲೆ ಎಂದು ಘೋಷಿಸಲ್ಪಟ್ಟಿರುವುದು ನಿಜವೇ;

ಆ) ಬಿಜಾಪುರ ಜಿಲ್ಲೆ ಮೇಲಿಂದ ಮೇಲೆ ಬರಗಾಲಕ್ಕೆ ತುತ್ತಾಗುತ್ತಿರುವುದು ನಿಜವೇ?

ಇ) ಹಾಗಿದ್ದಲ್ಲಿ, ಜಿಲ್ಲೆಯನ್ನು ಜಲಸಂವರ್ಧನೆ ಯೋಜನೆ ಯಡಿಯಲ್ಲಿ ಸೇರಿಸಿ ಕಾಮಗಾರಿ ಕೈಗೆತ್ತಿಕೊಳ್ಳಲಾಗುವುದೇ;

ಈ) ಜಲಸಂವರ್ಧನೆ ಯೋಜನೆಗೆ ಹೊಂದಿಕೊಳ್ಳತಕ್ಕಂಥ ಮಾರ್ಗ ಸೂಚಿಗಳಿಗೆ ಅರ್ಹತೆ ಹೊಂದಿರ ತಕ್ಕಂಥ ಬಿಜಾಪುರ ಜಿಲ್ಲೆಯನ್ನು ತಕ್ಷಣ ಕ್ರಮವಿಟ್ಟು ಜಲಸಂವರ್ಧನೆ ಯೋಜನೆಯಡಿಯಲ್ಲಿ ಕಾರ್ಯಗತಗೊಳಿಸುವುದು ಸರ್ಕಾರದ ಆದ್ಯ ಕರ್ತವ್ಯ ಅಲ್ಲವೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು) :

ಅ) ಬಿಜಾಪುರ ಜಿಲ್ಲೆಯ ಕೆಲವು ತಾಲ್ಲೂಕುಗಳನ್ನು ಅತೀ ಹಿಂದುಳಿದ ತಾಲ್ಲೂಕುಗಳೆಂದು ಘೋಷಿಸಿರುವುದು ನಿಜ.

ಆ) ನಿಜ.

ಇ,ಈ) ವಿಶ್ವಬ್ಯಾಂಕಿನೊಂದಿಗೆ ಈಗಾಗಲೇ ಮಾಡಿಕೊಂಡಿರುವ ಒಪ್ಪಂದದಂತೆ ಜಲಸಂವರ್ಧನೆ ಯೋಜನೆಯ ಕಾರ್ಯವ್ಯಾಪ್ತಿಯಡಿ ಹೊಸ ಜಿಲ್ಲೆಗಳನ್ನು ಈ ಹಂತದಲ್ಲಿ ಸೇರಿಸಲು ಸಾಧ್ಯವಾಗುವುದಿಲ್ಲ.

3433(6261) ಶ್ರೀ ಶಿವಾನಂದ ಎಸ್ ಪಾಟೀಲ್ (ಬಸವನಬಾಗೇವಾಡಿ) : ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?